# ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ದಿನಾಂಕ: 03.08.2021 ರಂದು ಜರುಗಿದ ಇಲಾಖಾ ಪದೋನ್ನತಿ ಸಮಿತಿ ಸಭೆಯ ನಡುವಳಿಗಳು

(ದಿನಾಂಕ: 28.02.2022 ರವರೆಗೆ ಉಂಟಾಗಿರುವ ಖಾಲಿ ಸ್ಥಾನಗಳು)

ಕರ್ನಾಟಕ ವಿಶ್ವವಿದ್ಯಾಲಯದ ಬೋಧಕೇತರ ನೌಕರರ ಮುಂಬಡ್ತಿ ವಿಷಯವನ್ನು ಪರಿಶೀಲಿಸಲು ದಿನಾಂಕ: 22.03.2022 ರಂದು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿದ ಇಲಾಖಾ ಪದೋನ್ನತಿ ಸಮಿತಿಗೆ ಈ ಕೆಳಗಿನ ಸದಸ್ಯರು ಹಾಜರಾಗಿದ್ದರು.

1) ಕುಲಪತಿಗಳು – ಅಧ್ಯಕ್ಷರು
2) ಕುಲಸಚಿವರು – ಸದಸ್ಯರು
3) ಕುಲಸಚಿವರು(ಮೌಲ್ಯಮಾಪನ) – ಸದಸ್ಯರು
4) ಹಣಕಾಸು ಅಧಿಕಾರಿಗಳು – ಸದಸ್ಯರು
5) ಶ್ರೀಮತಿ.ಹಂಸವೇಣಿ.ಎನ್. ಸಿಂಡಿಕೇಟ್ ಸದಸ್ಯರು – ಸದಸ್ಯರು
6) ಡಾ. ಎಂ.ವಾಯ್. ಕರಿದುರ್ಗನವರ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ – ಸದಸ್ಯರು (ಪ.ಜಾ/ಪ.ಪಂ. ಪ್ರತಿನಿಧಿ)
7) **ಉಪಕುಲಸಚಿವರು ಸಿಆಸು ವಿಭಾಗ, ಹಾಗೂ ಸಮಿತಿಯ ಸಂಚಾಲಕರು**

ಇಲಾಖಾ ಪದೋನ್ನತಿ ಸಮಿತಿಯ ಸದಸ್ಯರನ್ನು ಕುಲಪತಿಗಳು ಪ್ರಾಸ್ತಾವಿಕವಾಗಿ ಸ್ವಾಗತಿಸಿದರು. **ಕಚೇರಿ ಅಧೀಕ್ಷಕರು (ಆಡಳಿತ), ಸಹಾಯಕ ಅಧೀಕ್ಷಕರು, ಸಹಾಯಕರ ಹುದ್ದೆಗಳನ್ನು** ದಿನಾಂಕ: 28.03.2022 ರವರೆಗಿನ ಖಾಲಿ ಇರುವ ಹಾಗೂ ತತ್ಪರಿಣಾಮದ ಪ್ರಯುಕ್ತ ಉಂಟಾಗುವ ಖಾಲಿ ಸ್ಥಾನಗಳ ಎದುರಾಗಿ ಮುಂಬಡ್ತಿ ಮೂಲಕ ಭರ್ತಿ ಮಾಡುವ ಕುರಿತು ಪ್ರಸ್ತಾವನೆಯನ್ನು ಸಮಿತಿಯ ಮುಂದೆ ಈ ಕೆಳಗಿನಂತೆ ಮಂಡಿಸಿದರು. ಹಾಗೂ ಮಾನ್ಯ ಉಚ್ಛ ನ್ಯಾಯಾಲಯ, ಧಾರವಾಡದಲ್ಲಿ ದಾಖಲಾದ WP No. 103023/2021(S-PRO) ರಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ಆದೇಶಕ್ಕೆ ಒಳಪಟ್ಟು ಮತ್ತು ಸದರ ವಿಷಯವಾಗಿ ವಿಶ್ವವಿದ್ಯಾಲಯವು ತೆಗೆದುಕೊಳ್ಳುವ ನಿರ್ಣಯಕ್ಕೆ ಈ ಕೆಳಗಿನ ಪ್ರಸ್ತಾಪಿತ ಪದೋನ್ನತಿ ಸಿಬ್ಬಂದಿಗಳು ಬದ್ಧನಾಗಿರುವುದಾಗಿ ರೂ.20/- ಗಳ ಛಾಪಾ ಕಾಗದದ ಮೇಲೆ ಪ್ರಮಾಣ ಪತ್ರವನ್ನು ಪಡೆದು ಪದೋನ್ನತಿ ಆದೇಶವನ್ನು ನೀಡುವಂತೆ ನಿರ್ಣಯಿಸಲಾಯಿತು.

**1) ಅಧೀಕ್ಷಕರು:** ಸಹಾಯಕ ಅಧೀಕ್ಷಕ ಹುದ್ದೆಯಿಂದ ಪದೋನ್ನತಿ ಮೂಲಕ ಭರ್ತಿ ಮಾಡುವುದು. ಸಹಾಯಕ ಅಧೀಕ್ಷಕ ಹುದ್ದೆಯಲ್ಲಿ 3 ವರ್ಷಗಳ ಅರ್ಹತಾ ಸೇವೆಯನ್ನು ಪೂರೈಸಿರಬೇಕು.
ಅ) ಮಂಜೂರಾದ ಹುದ್ದೆಗಳ ಸಂಖ್ಯೆ: 41 ಆ) ಕಾರ್ಯನಿರತ ಹುದ್ದೆಗಳ ಸಂಖ್ಯೆ: 39 ಇ) ಪ್ರಸ್ತುತ ಖಾಲಿ ಹುದ್ದೆಗಳ ಸಂಖ್ಯೆ: 02
ಈ) ಸಾಂದರ್ಭಿಕ (ತತ್ಪರಿಣಾಮ) ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ: 00 ಉ) ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ: 02

| Sl. No. | Cause of Vacancy Retired/Consequential | Date of vacancy | Roster point | Name of persons likely to be promotee | Date of entry into the cadre of AOS | Date of declaration of officiation period as AOS | Date of Eligibility for Promotion | Remarks |
|---|---|---|---|---|---|---|---|---|
| 1 | S.B.Kudari, Expired | 23.01.2022 | 20 UR | A.M. Albal (SC) | 01.06.2017 | 01.06.2018 | 24.01.2022 | |
| 2 | M.I.Manta, Retired | 28.02.2022 | 21 SC* | Y.B.Chikkagoudar | 01.06.2017 | 01.06.2018 | 01.03.2022 | SC Quota fu;filled |

* ಸರ್ಕಾರಿ ಆದೇಶ ದಿನಾಂಕ: 13.04.1999 ರ ಪ್ರಕಾರ ಕಾರ್ಯನಿರತ ಸಿಬ್ಬಂದಿಗಳ ಸಂಖ್ಯಾಬಲ ಪ.ಜಾ 15% ಹಾಗೂ ಪ.ಪಂ 3% ಇದ್ದಲ್ಲಿ ಮೀಸಲಾತಿ ಅನ್ವಯಿಸಲು ಬರುವುದಿಲ್ಲ. ಅದರನ್ವಯ ಪ್ರಸ್ತುತ ಪ.ಜಾ 06 ಹಾಗೂ ಪ.ಪಂ. 02 ಇರಬೇಕಾದ ಸಂಖ್ಯಾಬಲ ಮೀರಿರುವುದರಿಂದ ಮೀಸಲಿರುವ ಬಿಂದುಗಳ ಎದುರಾಗಿ ಜೇಷ್ಠತೆಯಲ್ಲಿ ಜೇಷ್ಠರಾದ ಹಿರಿಯ ಸಿಬ್ಬಂದಿಯನ್ನು ಪರಿಗಣಿಸಬೇಕಾಗುತ್ತದೆ.

ಮು.ತಿ.ನೋ. . . .

**ನಿರ್ಣಯ :**

ಪ್ರಸ್ತಾವನೆಯಲ್ಲಿ ತಿಳಿಸಿದಂತೆ ಕಚೇರಿ ಅಧೀಕ್ಷಕರು (ಆಡಳಿತ) ಹುದ್ದೆಯ ಖಾಲಿಯಿರುವ ಹುದ್ದೆಯ ಎದುರಗಡೆಯ ಅಭ್ಯರ್ಥಿಗಳಿಗೆ ಕಚೇರಿ ಅಧೀಕ್ಷಕರು (ಆಡಳಿತ) ಗಳ ಮುಂಬಡ್ತಿಯನ್ನು ನೀಡುವುದಕ್ಕೆ ಪ್ರಸ್ತಾಪಿತ ಸಿಬ್ಬಂದಿಗಳ ಹೆಸರನ್ನು ಶಿಫಾರಸ್ಸು ಮಾಡಲಾಯಿತು. ಮುಂದುವರೆದು ಪ್ರಸ್ತಾವನೆಯಲ್ಲಿ ನಮೂದಿಸಿದ ಅನುಕ್ರಮ 2 ಸಿಬ್ಬಂದಿಗೆ ಸಂಬಂಧಿಸಿದಂತೆ, ಅವರು ವೇತನ ಮೇಲ್ದರ್ಜೀಕರಣದ ಸೌಲಭ್ಯವನ್ನು ಪಡೆದಿರುವುದರಿಂದ ಮತ್ತು ಈ ಸೌಲಭ್ಯವನ್ನು ಸೌಲಭ್ಯವನ್ನು ಸರ್ಕಾರ ತನ್ನ ದಿನಾಂಕ: 20..2.2016 ರ ಪ್ರಕಾರ ಹಿಂಪಡೆಯಲು ಸ್ಪಷ್ಟ ನಿರ್ದೇಶನವನ್ನು ನೀಡಿದ ಹಿನ್ನಲೆಯಲ್ಲಿ ಸದರಿ ಸ್ಟೆಪ್ಪಿಂಗ್-ಅಪ್ ಸೌಲಭ್ಯವನ್ನು ಹಿಂಪಡೆಯಲು ತೀರ್ಮಾಣಿಸಿದ ಕ್ರಮವನ್ನು ಬಾಧಿತ ನೌಕರರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ. 104339-104342/2016 (S-RES) & 104343-104346/2016 & 104347-104350/2016 ಗಳ ಮೂಲಕ ಪ್ರಶ್ನಿಸಿ ಮತ್ತು ಈ ಸಂಬಂಧವಾಗಿ ಮಾನ್ಯ ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿರುವ ಪ್ರಯುಕ್ತ ಅವರಿಗೆ ನೀಡಲಾಗಿರುವ ಸ್ಟೆಪ್ಪಿಂಗ್-ಅಪ್ ಸೌಲಭ್ಯವನ್ನು ಹಿಂಪಡೆಯುವ ಕ್ರಮವನ್ನು ತಡೆಹಿಡಿಯಲಾಗಿರುತ್ತದೆ. ಈ ಸನ್ನಿವೇಶದಲ್ಲಿ ಅನುಕ್ರಮ ಸಂಖ್ಯೆ 2 ಸಿಬ್ಬಂದಿಗೆ ಪದೋನ್ನತಿಯನ್ನು ಅವರು ಸಲ್ಲಿಸಿದ ಸೇವಾವಧಿಯನ್ನು ಪರಿಗಣಿಸಿದರೂ ಕೂಡ ಅವರಿಗೆ ಪದೋನ್ನತಿ ಹೊಂದಿದ ಹುದ್ದೆಯ ವೇತನ ಶ್ರೇಣಿ ಅಥವಾ ಬಡ್ತಿ ಮಂಜೂರು ಮಾಡಿದ್ದಲ್ಲಿ ಅದು ಮಾನ್ಯ ಉಚ್ಚನ್ಯಾಯಾಲಯದ ತಡೆಯಾಜ್ಞೆ ಆದೇಶಕ್ಕೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇರುವುದರಿಂದ ಸಧ್ಯದ ಪರಿಸ್ಥಿತಿಯಲ್ಲಿ ಅವರುಗಳನ್ನು ಅಧೀಕ್ಷಕ ಹುದ್ದೆಗೆ ಪದೋನ್ನತಿಗೆ ಶಿಫಾರಸ್ಸು ಮಾಡಿ ಮಾನ್ಯ ಉಚ್ಚನ್ಯಾಯಾಲಯದ ಅಂತಿಮ ನಿರ್ಣಯ ಬರುವವರೆಗೂ ಅವರು ಪ್ರಸ್ತುತ ಹೊಂದಿದ ವೇತನ ಶ್ರೇಣಿ ಮತ್ತು ಪಡೆಯುತ್ತಿರುವ ಮೂಲ ವೇತನದಲ್ಲಿಯೇ ಮುಂದುವರೆಸಲು ಶಿಫಾರಸ್ಸು ಮಾಡಿ ಇಲಾಖಾ ಪದೋನ್ನತಿ ಸಮಿತಿಯು ನಿರ್ಣಯಿಸಿತು. ಅದೇ ರೀತಿಯಾಗಿ ಅನುಕ್ರಮ ಸಂಖ್ಯೆ. 1 ರಲ್ಲಿ ಕಾಣಿಸಿದ ಸಿಬ್ಬಂದಿಗೆ ಸಂಬಂಧಿಸಿ ಯಾವುದೇ ಇಲಾಖಾ ವಿಚಾರಣೆ ಅಥವಾ ಲೆಕ್ಕಪರಿಶೋಧನೆಯ ಆಕ್ಷೇಪಣೆ ಇಲ್ಲದಿರುವ ಪ್ರಯುಕ್ತ ಅವರನ್ನು ಅಧೀಕ್ಷಕ ಹುದ್ದೆಗೆ ಯಾವುದೇ ಷರತ್ತುಗಳಿಲ್ಲದೇ ಪದೋನ್ನತಿಗೆ ಶಿಫಾರಸ್ಸು ಮಾಡಲು ಇಲಾಖಾ ಪದೋನ್ನತಿ ಸಮಿತಿಯು ನಿರ್ಣಯಿಸಿತು.

**2) ಸಹಾಯಕ ಅಧೀಕ್ಷಕರು:** ಹಿರಿಯ ಸಹಾಯಕ ಹಾಗೂ ಶೀಘ್ರಲಿಪಿಗಾರರ ಹುದ್ದೆಗಳಿಂದ 8:1 ಅಂದರೆ ಪ್ರತಿ 9 ಬಿಂಧುಗಳ ಆವೃತ್ತಿಯಲ್ಲಿ 6 ನೇ ಖಾಲಿ ಹುದ್ದೆಯನ್ನು ಶೀಘ್ರಲಿಪಿಗಾರ ಹುದ್ದೆಯಿಂದ ಸಹಾಯಕ ಅಧೀಕ್ಷಕರ ಮುಂಬಡ್ತಿ ನೀಡುವುದು. ಅರ್ಹ ಶೀಘ್ರಲಿಪಿಗಾರರು ಲಭ್ಯವಿಲ್ಲದಿದ್ದಲ್ಲಿ ಸದರ ಖಾಲಿ ಹುದ್ದೆಯನ್ನು ಸಹಾಯಕ ಹುದ್ದೆಯಿಂದ ಸಹಾಯಕ ಅಧೀಕ್ಷಕರ ಮುಂಬಡ್ತಿ ಮೂಲಕ ಭರ್ತಿ ಮಾಡತಕ್ಕದ್ದು. ಸಂಬಂಧಿಸಿದ ಹುದ್ದೆಯಲ್ಲಿ 3 ವರ್ಷಗಳ ಅರ್ಹತಾ ಸೇವೆಯನ್ನು ಪೂರೈಸಿರಬೇಕು.

ಅ) ಮಂಜೂರಾದ ಹುದ್ದೆಗಳ ಸಂಖ್ಯೆ: 41 ಆ) ಕಾರ್ಯನಿರತ ಹುದ್ದೆಗಳ ಸಂಖ್ಯೆ: 41 ಇ) ಪ್ರಸ್ತುತ ಖಾಲಿ ಹುದ್ದೆಗಳ ಸಂಖ್ಯೆ: 00

ಈ) ಸಾಂದರ್ಭಿಕ (ತತ್ವರಿಣಾಮ) ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ: 02 ಉ) ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ: 02

| Sl. No. | Cause of Vacancy Retired/Consequential | Date of vacancy | Roster point | Name of persons likely to be promotee | Date of entry into the cadre of Asst | Date of declaration of officiation period as Asst | Date of Eligibility for Promotion | Remarks |
|---|---|---|---|---|---|---|---|---|
| 1 | A.M. Albal | 23.01.2022 | 32 UR * | K. Santosh | 01.03.2015 | 01.03.2016 | 24.01.2022 | |
| 2 | Y.B.Chikkagoudar | 01.03.2022 | 33 UR | M.B.Shahapur | 01.04.2015 | 01.04.2016 | 01.03.2022 | |

* ಪ್ರಸಕ್ತ ಪದೋನ್ನತಿಗೆ ಸಂಬಂಧಿಸಿದಂತೆ ಅರ್ಹ ಶೀಘ್ರಲಿಪಿಗಾರರು ಲಭ್ಯವಿರುವುದಿಲ್ಲ.

ನಿರ್ಣಯ:

ಪ್ರಸ್ತಾವನೆಯಲ್ಲಿ ತಿಳಿಸಿದಂತೆ ಅಧೀಕ್ಷಕ ಹುದ್ದೆಯ ಮುಂಬಡ್ತಿ ಕ್ರಮದಿಂದಾಗಿ ಉಂಟಾದ ಸಾಂದರ್ಭಿಕ (ತತ್ವರಿಣಾಮದ) ಖಾಲಿ ಹುದ್ದೆಯ ಎದುರಗಡೆಯಲ್ಲಿ ಕಾಣಿಸಿದ ಅಭ್ಯರ್ಥಿಗಳಿಗೆ ಸಂಬಂಧಿಸಿ ಯಾವುದೇ ಇಲಾಖಾ ವಿಚಾರಣೆ ಆಥವಾ ಲೆಕ್ಕಪರಿಶೋಧನೆಯ ಆಕ್ಷೇಪಣೆ ಇಲ್ಲದಿರುವ ಪ್ರಯುಕ್ತ ಸದರಿ ಸಿಬ್ಬಂದಿಗಳನ್ನು ಸಹಾಯಕ ಅಧೀಕ್ಷಕ ಹುದ್ದೆಗೆ ಯಾವುದೇ ಷರತ್ತುಗಳಿಲ್ಲದೇ ಪದೋನ್ನತಿಗೆ ಶಿಫಾರಸ್ಸು ಮಾಡಲು ಇಲಾಖಾ ಪದೋನ್ನತಿ ಸಮಿತಿಯು ನಿರ್ಣಯಿಸಿತು.

**3) ಸಹಾಯಕರು:** 25% ಕ್ಕಿಂತ ಮೀರದಂತೆ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವುದು ಹಾಗೂ ಬಾಕಿ ಹುದೆಗಳನ್ನು ಕಿರಿಯ ಸಹಾಯಕ ಹುದ್ದೆಯಿಂದ ಪದೋನ್ನತಿ ಮೂಲಕ ಭರ್ತಿ ಮಾಡುವುದು. ಕಿರಿಯ ಸಹಾಯಕ ಹುದ್ದೆಯಲ್ಲಿ 5 ವರ್ಷಗಳ ಅರ್ಹತಾ ಸೇವೆಯನ್ನು ಪೂರೈಸಿರಬೇಕು.

ಅ) ಮಂಜೂರಾದ ಹುದ್ದೆಗಳ ಸಂಖ್ಯೆ: 78 ಆ) ನೇರ ನೇಮಕಾತಿ ಹುದ್ದೆಗಳ ಸಂಖ್ಯೆ: 19 ಇ) ಪದೋನ್ನತಿ ಹುದ್ದೆಗಳ ಸಂಖ್ಯೆ: 57 ಈ) ಕಾರ್ಯನಿರತ ಹುದ್ದೆಗಳ ಸಂಖ್ಯೆ : 77

ಪ್ರಸ್ತುತ ನೇರ ನೇಮಕಾತಿಯಲ್ಲಿ ಖಾಲಿ ಹುದ್ದೆಗಳ ಸಂಖ್ಯೆ: 19 (ನೇರನೇಮಕಾತಿಗೆ ಅನುಮತಿ ಇಲ್ಲದಿರುವುದರಿಂದ ಹಾಗೂ ಸಿ&ಆರ್ ತಿದ್ದುಪಡಿ ಕ್ರಮ ಜಾರಿಯಲ್ಲಿರುವುದರಿಂದ ಆಡಳಿತಾತ್ಮಕ ದೃಷ್ಟಿಯಿಂದ ಪ್ರಸ್ತುತ ಸದರ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿಮಾಡಿಕೊಳ್ಳಲಾಗುತ್ತಿದೆ)

ಅ) ಪ್ರಸ್ತುತ ಪದೋನ್ನತಿಯಲ್ಲಿ ಖಾಲಿ ಹುದ್ದೆಗಳ ಸಂಖ್ಯೆ: ೦೦ ಆ) ಸಾಂದರ್ಭಿಕ (ತತ್ಪರಿಣಾಮ) ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ: 02 ಉ) ಒಟ್ಟು ಖಾಲಿ ಹುದ್ದೆಗಳ ಸಂಖ್ಯೆ: 02

| Sl. No. | Cause of Vacancy Retired/Consequential | Date of vacancy | Roster point | Name of persons likely to be promotee | Date of entry into the cadre of Jr. Asst | Date of declaration of officiation period as Jr. Asst | Date of Eligibility for Promotion | Remarks |
|---|---|---|---|---|---|---|---|---|
| 1 | K. Santosh (Prom) | 24.01.2022 | 04 UR | T.V. Mutturayappa (ST) | 30.11.2015 | 30.11.2016 | 24.01.2022 | |
| 2 | M.B.Shahapur (Prom) | 01.03.2022 | 05 UR | Smt.N.U.Ganji (SC) | 02.02.2016 | 02.02.2017 | 01.03.2022 | |

**ನಿರ್ಣಯ:**

ಪ್ರಸ್ತಾವನೆಯಲ್ಲಿ ತಿಳಿಸಿದಂತೆ ಖಾಲಿಯಿರುವ ಸಹಾಯಕ ಹುದ್ದೆಗೆ ಮುಂಬಡ್ತಿಯನ್ನು ನೀಡುವುದಕ್ಕೆ ಪ್ರಸ್ತಾಪಿತ ಸಿಬ್ಬಂದಿಗಳ ಹೆಸರನ್ನು ಇಲಾಖಾ ಪದೋನ್ನತಿ ಸಮಿತಿಯು ಶಿಫಾರಸ್ಸು ಮಾಡಲಾಯಿತು. ಮುಂದುವರೆದು, ವಿಶ್ವವಿದ್ಯಾಲಯದ ಶಿಕ್ಷಕೇತರ ನೌಕರರಿಗೆ ಇಲಾಖಾ ಪರೀಕ್ಷೆಯನ್ನು ಜಾರಿಗೊಳಿಸಿ ದಿನಾಂಕ: 12.06.2008 ರಂದು ಅಧಿಸೂಚನೆಯನ್ನು ಹೊರಡಿಸಲಾಯಿತು. ಆ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ನೌಕರರ ಸಂಘಟನೆಗಳು ಇಲಾಖಾ ಪರೀಕ್ಷೆಗಳಲ್ಲಿ ನ್ಯೂನತೆಗಳು ಇರುವ ಪ್ರಯುಕ್ತ ಅದನ್ನು ಜಾರಿಗೊಳಿಸಬಾರದೆಂದು ಒತ್ತಾಯಿಸಿದ ಪ್ರಯುಕ್ತ ಸದರ ವಿಷಯವಾಗಿ ದಿನಾಂಕ: 14.08.2008 ರಂದು ಜರುಗಿದ ಸಿಂಡಿಕೇಟ್ ಸಭೆಯ ತನ್ನ ಠರಾವು ಸಂಖ್ಯೆ. 42 ರಲ್ಲಿ ಇಲಾಖಾ ಪರೀಕ್ಷೆ ಅನುಷ್ಠಾನಗೊಳಿಸಿದ ಅಧಿಸೂಚನೆಯನ್ನು ಹಿಂಪಡೆಯಲು ತೀರ್ಮಾನಿಸಿತು. ಮುಂದುವರೆದು, ದಿನಾಂಕ: 26.07.2011 ರಂದು ಜರುಗಿದ ಸಿಂಡಿಕೇಟ್ ಸಭೆಯು ತನ್ನ ಠರಾವು ಸಂಖ್ಯೆ. 12 ರಲ್ಲಿ ಇಲಾಖಾ ಪರೀಕ್ಷಾ ಅನುಶಾಸನಕ್ಕೆ ಮಾಡಿದ ತಿದ್ದುಪಡಿಗಳು ಘನತೆವೆತ್ತ ಕುಲಾಧಿಪತಿಗಳಿಂದ ಅನುಮೋದನೆಗೊಳ್ಳುವವರೆಗೂ ಅನುಶಾಸನದ ಅನುಷ್ಠಾನ ಪೂರ್ವದ ಕ್ರಮವನ್ನು ಮುಂದುವರೆಸಲು ತೀರ್ಮಾನಿಸಿದ ಪ್ರಯುಕ್ತ ಅಧಿಸೂಚನೆ ಸಂಖ್ಯೆ. 2543 ದಿನಾಂಕ: 10.08.2011 ಅನ್ನು ಹೊರಡಿಸಲಾಗಿರುತ್ತದೆ. ಆದ್ದರಿಂದ, ಪ್ರಸ್ತುತ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಇಲಾಖಾ ಪರೀಕ್ಷೆ ಅನುಶಾಸನ ಚಾಲ್ತಿಯಲ್ಲಿರುವುದಿಲ್ಲ. ಕಾರಣ, ಈ ಮೊದಲಿನಿಂದ ನಡೆದುಕೊಂಡು ಬಂದಿರುವಂತೆ ಪ್ರಸ್ತುತ ಸಹಾಯಕ ಹುದ್ದೆಗೆ ಪದೋನ್ನತಿಗೆ ಚಾಲ್ತಿಯಲ್ಲಿರುವ ಮಾನದಂಡನೆಗಳನ್ನೇ ಅನುಸರಿಸಿ 2 ಜನ ಸಿಬ್ಬಂದಿಗಳನ್ನು ಸಹಾಯಕ ಹುದ್ದೆಗೆ ಪದೋನ್ನತಿಗೊಳಿಸಲು ಶಿಫಾರಸ್ಸು ಮಾಡಿ ಇಲಾಖಾ ಪದೋನ್ನತಿ ಸಮಿತಿ ನಿರ್ಣಯಿಸಿತು. ಹಾಗೂ ಸದರಿ 2 ಜನ್ ಸಿಬ್ಬಂದಿಗಳಿಗೆ ಪದೋನ್ನತಿ ಆದೇಶ ನೀಡಿದ ಒಂದು ವರ್ಷದೊಳಗೆ ಕೆ.ಪಿ.ಎಸ್.ಸಿಯಿಂದ ನಡೆಸಲ್ಪಡುವ ಜನರಲ್ ಲಾ ಭಾಗ-01 ಮತ್ತು ಭಾಗ-2 ಮತ್ತು ಅಕೌಂಟ್ಸ್ ಹೈಯರ್ ಹಾಗೂ ಅಕೌಂಟ್ಸ್ ಲೋಯರ್ ಇಲಾಖಾ ಪರೀಕ್ಷೆಯನ್ನು ತೇರ್ಗಡೆ ಹೊಂದಬೇಕು. ಒಂದು ವೇಳೆ ಇಲಾಖಾ ಪರೀಕ್ಷೆಯನ್ನು ಒಂದು ವರ್ಷದೊಳಗೆ ತೇರ್ಗಡೆ ಹೊಂದದೇ ಇದ್ದರೆ ಮುಂದಿನ ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವ ಷರತ್ತನ್ನು ವಿಧಿಸಲು ಇಲಾಖಾ ಪದೋನ್ನತಿ ಸಮಿತಿ ನಿರ್ಣಯಿಸಿತು.

ಮುಂದುವರೆದು, ಸಮಿತಿಯಲ್ಲಿ ಕಾರ್ಯನಿರ್ವಹಿಸಿದ ಎಲ್ಲ ಸದಸ್ಯರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ ಇಲಾಖಾ ಪದೋನ್ನತಿ ಸಮಿತಿ ಸಭೆಯನ್ನು ಮುಕ್ತಾಯಗೊಳಿಸಿತು.

22/3/22
ಕುಲಪತಿಗಳು
ಅಧ್ಯಕ್ಷರು

22/3/22
ಕುಲಸಚಿವರು
ಸದಸ್ಯರು

22/3/22
ಕುಲಸಚಿವರು (ಮೌಲ್ಯಮಾಪನ)
ಸದಸ್ಯರು

2008 ರ ಇಲಾಖಾ ಪರೀಕ್ಷಾ ಅನುಶಾಸನದ ಪ್ರಕಾರ ಕ್ರಮ ಕೈಗೊಳ್ಳತಕ್ಕದ್ದು.

ಶ್ರೀಮತಿ.ಹಂಸವೇಣಿ
ಸಿಂಡಿಕೇಟ್ ಸದಸ್ಯರು ಹಾಗೂ ಸದಸ್ಯರು

22/3/22
ಹಣಕಾಸು ಅಧಿಕಾರಿಗಳು
ಸದಸ್ಯರು

ಡಾ. ಎಂ.ವಾಯ್. ಕರಿದುರ್ಗನವರ
ಸದಸ್ಯರು (ಪ.ಜಾ/ಪ.ಪಂ. ಪ್ರತಿನಿಧಿ)

22/3/22
ಉಪಕುಲಸಚಿವರು ಹಾಗೂ
ಸಮಿತಿಯ ಸಂಚಾಲಕರು